ಅ) ಕಾಮಗಾರಿಯ ಅಳತೆ ಪುಸ್ತಕದ ಪ್ರತಿಯನ್ನು ಸಾರ್ವಜನಿಕರಿಗೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಈ ವ್ಯವಸ್ಥೆಯನ್ನು ಎಷ್ಟು ದಿನಗಳಲ್ಲಿ ಮಾಡಲಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಂತಹ ಪ್ರಸ್ತಾಪ ಸರ್ಕಾರದಲ್ಲಿ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಮೀನುಗಾರರಿಗೆ ಗ್ರೂಪ್ ಹೌಸಿಂಗ್ ಮಂಜೂರಾತಿ

532 - ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೀನುಗಾರರಿಗೆ ಗ್ರೂಪ್ ಹೌಸಿಂಗ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಮಂಜೂರಾದ ಹಣ ಎಷ್ಟು; ಹಾಗೂ ಅದರ ಗುರಿ ಎಷ್ಟು?

ಆ) ರಾಜ್ಯದಲ್ಲಿ ಈ ಯೋಜನೆಯಡಿ ಎಷ್ಟು ಮನೆ ಮಂಜೂರಾಗಿದೆ?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಮಟಾ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಮಂಜೂರಾದ ಮನೆಗಳೆಷ್ಟು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಮೀನುಗಾರರ ಗುಂಪು ಮನೆಯೋಜನೆಯಡಿ ಕೇಂದ್ರ ಸರ್ಕಾರದಿಂದ ರೂ. 180.2476 ಲಕ್ಷ ಹಣವನ್ನು 1589 ಮನೆಗಳನ್ನು 48 ಕೊಳವೆ ಬಾವಿಗಳನ್ನು ಮತ್ತು 7 ಸಾಮೂಹಿಕ ಭವನವನ್ನು ನಿರ್ಮಿಸುವ ಗುರಿಯ ಮಂಜೂರಾತಿ ನೀಡಿರುತ್ತದೆ.

ಆ) ರಾಜ್ಯದ 32 ಸ್ಥಳಗಳಲ್ಲಿ 1589 ಮನೆಗಳು ಮಂಜೂರಾಗಿದೆ:

1)	ಮಂಡ್ಯ ಜಿಲ್ಲೆ	-	250
2)	ಮೈಸೂರು ಜಿಲ್ಲೆ	-	340
3)	ಹಾಸನ ಜಿಲ್ಲೆ	-	139
4)	ಶಿವಮೊಗ್ಗ ಜಿಲ್ಲೆ	-	123
5)	ಉತ್ತರ ಕನ್ನಡ ಜಿಲ್ಲೆ	-	99
6)	ದಕ್ಷಿಣ ಕನ್ನಡ ಜಿಲ್ಲೆ	-	109
7)	ಬೆಳಗಾಂ ಜಿಲ್ಲೆ	-	217
8)	ಗುಲಬರ್ಗ ಜಿಲ್ಲೆ	-	100
9)	ಬಿಜಾಪುರ ಜಿಲ್ಲೆ	-	162
10)	ಕೋಲಾರ ಜಿಲ್ಲೆ	-	50
	ಒಟ್ಟು		1589

ಇ) ಇಲ್ಲ